quickmarketreports.com Date : 06-10-2015

# ಹಬ್ಬಗಳ ಸೀಜನ್ ಬೇಡಿಕೆಯಿಂದ ಸಕ್ಕರೆ ಫ್ಯೂಚರ್ ದರ 1.59 ಶೇಕಡಾ ಹೆಚ್ಚಳ

ಹಬ್ಬಗಳ ಸೀಜನ್ ಬೇಡಿಕೆ ಹೆಚ್ಚಳದಿಂದ, ಸ್ಪೆಕ್ಯೂಲೇಟರ್‌ಗಳ ಚಟುವಟಿಕೆಗಳಿಂದಾಗಿ, ಸಕ್ಕರೆ ದರ ಫ್ಯೂಚರ್ ಮಾರುಕಟ್ಟೆಯಲ್ಲಿ 1.59 ಶೇಕಡಾ ಹೆಚ್ಚಳಗೊಂಡು ಕ್ವಿಂ.ಗೆ ರೂ.2625 ರಲ್ಲಿ ವ್ಯವಹಾರ ಕಂಡಿದೆ. ಮಾರುಕಟ್ಟೆಯಲ್ಲಿನ ವಿಫುಲ ದಾಸ್ತಾನು, ಮಿಲ್‌ಗಳಿಂದ ಸಾಕಷ್ಟು ಪೂರೈಕೆಯಿಂದ ದರ ಗಳಿಕೆ ಸೀಮಿತ ಗೊಂಡಿದೆ.

ಎನ್‌ಸಿಡಿಇಎಕ್ಸ್‌ನಲ್ಲಿ ಅಕ್ಟೋಬರ್ ವಿತರಣೆಯ ಸಕ್ಕರೆ 1.34 ಶೇಕಡಾ ಹೆಚ್ಚಳವಾಗಿ 25790 ಲಾಟ್‌ಗಳ ಖರೀದಿ ಆಸಕ್ತಿಯಿದ್ದು ಕ್ವಿಂ. ಗೆ ರೂ.2564 ಆಗಿತ್ತು. ಡಿಸೆಂಬರ್ ವಿತರಣೆಯ ಸಕ್ಕರೆ 42780 ಲಾಟ್‌ಗಳ ಖರೀದಿ ಆಸಕ್ತಿ ಹೊಂದಿದ್ದು ದರ 1.59 ಶೇಕಡಾ ಹೆಚ್ಚಳವಾಗಿ ಕ್ವಿಂಗೆ ರೂ.2625 ಮತ್ತು ಮುಂಬರುವ ಹಬ್ಬಗಳ ಸೀಜನ್‌ಗಾಗಿ ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳ ಕಂಡಿದೆಯೆಂದು ವಿಶ್ಲೇಷಕರ ಅನಿಸಿಕೆ.